ದಿನಾಂಕ 02-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : ಪ್ರತಿವಾದಿಯರ ಪರ ಶ್ರೀ. ಎಸ್.ಎ. ವಕೀಲರಿಂದ

ಹನುಮಂತ ತಂ. ಭೀಮಪ್ಪ ಇವರು ನಮ್ಮ ಬಾಜು ಜಮೀನಿನ ಮಾಲೀಕರು. ಆತನ ಜಮೀನು ನನ್ನ ಜಮೀನಿನ ಪಶ್ಚಿಮ ದಿಕ್ಕಿಗೆ ಇದೆ. ನನ್ನ ತಂದೆಯ ಹೆಸರು ಭೀಮಪ್ಪ. ನನ್ನ ತಾತನ ಹೆಸರು ನಿಂಗಪ್ಪ. ಸುಲ್ತಾನಪುರ ಗ್ರಾಮದ ಜಮೀನು ಸರ್ವೆ ನಂ. 140 ಇದರ ಒಟ್ಟು ಕ್ಷೇತ್ರ 8 ಎಕರೆ 15 ಗುಂಟೆ ಎಂದರೆ ಸರಿ. ಇದರ ಪೈಕಿ 4 ಎಕರೆ

11 ಗುಂಟೆ ಜಮೀನನ್ನು ಧನಲಕ್ಷ್ಮೀ ಗಂ. ಸುಬ್ಬಾರಾವ್ ಇವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿಯವರಿಗೆ ಮಾರಾಟ ಮಾಡಿದ ನಂತರ 4 ಎಕರೆ 4 ಗುಂಟೆ ಜಮೀನು ಉಳಿಯುತ್ತದೆ ಎಂದರೆ ಸರಿ. ಸದರಿ 4 ಎಕರೆ 4 ಗುಂಟೆ ಜಮೀನು ನನ್ನ ತಂದೆ ಭೀಮಪ್ಪ ತಂ. ನಿಂಗಪ್ಪ ಇವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸದರಿ 4 ಎಕರೆ 4 ಗುಂಟೆ ಪೈಕಿ 3 ಎಕರೆ 26 ಗುಂಟೆ ಜಮೀನನ್ನು ನಾರಾಯಣರೆಡ್ಡಿ ಇವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿಯವರಿಗೆ ಮಾರಾಟ ಮಾಡಿದ ನಂತರ 18 ಗುಂಟೆ ಜಮೀನು ಉಳಿಯುತ್ತದೆ ಎಂದರೆ ಸರಿ. ಈ 18 ಗುಂಟೆ ಜಮೀನು ಭೀಮಪ್ಪ ತಂ. ನಿಂಗಪ್ಪ ಇವರ ಹೆಸರಿನಲ್ಲಿ ಇರುತ್ತದೆ. ಈ ದಾವೆ ನಾನು 18 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ದಾಖಲಿಸಿದ್ದೇನೆ. ನಾರಾಯಣರೆಡ್ಡಿ ಇವರ ಜಮೀನಿನ ಪಕ್ಕ ನಮಗೆ ಸಂಬಂಧಿಸಿದ 1 ಎಕರೆ 7 ಗುಂಟೆ ಜಮೀನು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಕಬ್ಜಾ ವಹಿವಾಟಿಯಲ್ಲಿ ನಾವೇ ಇದ್ದೇವೆ.

ಪ್ರತಿವಾದಿಯರು ನನಗೆ ನಾನು ನನ್ನ ಜಮೀನಿಗೆ ಹೋಗುವಾಗ ನನ್ನನ್ನು ಕಡಿಯುತ್ತೇನೆ ಬಡಿಯುತ್ತೇನೆ ಅಂತಾ ಹೆದರಿಸುತ್ತಾರೆ. ಈ ಸಂಬಂಧ ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದೇನೆ. ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನಾನು ವಾದ ಪತ್ರದಲ್ಲಿ ತೋರಿಸಿದ ದಾವಾ ಆಸ್ತಿಯ ಚೆಕ್‌ಬಂದಿಯಲ್ಲಿ ಯಾವ ಕಡೆಗೂ ನಾರಾಯಣರೆಡ್ಡಿ ಇವರ ಜಮೀನು ತೋರಿಸಿಲ್ಲ ಎಂದರೆ ಸರಿ. ನಾನು ವಾದ ಪತ್ರದಲ್ಲಿ ದಾವಾ ಆಸ್ತಿಯ ಚೆಕ್‌ಬಂದಿಯನ್ನು ತಪ್ಪಾಗಿ ನಮೂದಿಸಿದ್ದು, ನನ್ನ ಜಮೀನಿನ ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ಭೀಮಣ್ಣ ಮತ್ತು ನರಸಪ್ಪ ಇವರ ಜಮೀನನ್ನು ತಪ್ಪಾಗಿ ತೋರಿಸಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ನಿರ್ಬಂಧಕಾಜ್ಞೆ ಪರಿಹಾರ ಪಡೆಯಲು ಸುಳ್ಳು ಚೆಕ್‌ಬಂದಿ ತೋರಿಸಿ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ವಾದ ಪತ್ರದಲ್ಲಿ ತೋರಿಸಿದ ದಾವಾ ಆಸ್ತಿ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಆ ಕಾರಣ ಪ್ರತಿವಾದಿಯರು ನನಗೆ ಯಾವುದೇ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

2012 ರಲ್ಲಿ ಸುಲ್ತಾನಪುರ ಗ್ರಾಮದ ಸರ್ವೆ ನಂ. 140 ಮೋಜಣಿ ಮಾಡಲ್ಪಟ್ಟಿತ್ತು ಎಂದರೆ ಸರಿ. ಆ ಕಾಲಕ್ಕೆ ಅದರ ಕಬ್ಜಾ ವಹಿವಾಟೆಯಲ್ಲಿದ್ದ ಮಾಲೀಕರ ಹೆಸರಿಗೆ ಫಾರಂ 10 ನ್ನು ಮಾಡಲಾಗಿತ್ತು ಎಂದರೆ ಸರಿಯಲ್ಲ. ಆ ಕಾಲಕ್ಕೆ ನನ್ನ ತಂದೆಯ ಹೆಸರಿಗಾಗಲೀ ಅಥವಾ ನನ್ನ ತಾಯಿಯ ಹೆಸರಿಗಾಗಲೀ ಸದರಿ ಸರ್ವೆ ನಂಬರ್‌ನಲ್ಲಿ ಜಮೀನು ಇದೆ ಎಂದು ಎಲ್ಲಿಯೂ ನಮೂದಿಸಿಲ್ಲ ಎಂದರೆ ಸರಿಯಲ್ಲ. ಈ ಕಾರಣ ಈ ದಾವೆಯಲ್ಲಿ ಕೇಳಿದಂತೆ ಯಾವುದೇ ಪರಿಹಾರವನ್ನು ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ನನಗೂ ಮತ್ತು ಪ್ರತಿವಾದಿಯರಿಗೂ ಬೇರೆ ವಿಚಾರಗಳಿಗೆ ಸಂಬಂಧಿಸಿದಂತೆ ವೈಮನಸ್ಸು ಇತ್ತು ಎಂದರೆ ಸಾಕ್ಷಿ ಜಮೀನಿನ ವಿಚಾರಕ್ಕೆ ಮನಸ್ತಾಪಗಳಿದ್ದವು ಎಂದು ನುಡಿಯುತ್ತಾರೆ. ಸುಮಾರು 10 ವರ್ಷಗಳಿಂದ ಮನಸ್ತಾಪಗಳಿವೆ. ನನ್ನ ಜಮೀನಿಗೆ ಸಂಬಂಧಿಸಿದಂತೆ ಮತ್ತು ಅದರಲ್ಲಿ ಕಾಲುವೆ ತೆಗೆಸುವ ವಿಚಾರಕ್ಕೆ ಹಾಗೂ ನನ್ನ ಜಮೀನಿನ ಕಬ್ಜಾ ವಹಿವಾಟೆಗೆ ಸಂಬಂಧಿಸಿದಂತೆ ಮನಸ್ತಾಪಗಳಿದ್ದವು.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ. ಹೇ. ಕೇ. ಸರಿ ಇದೆ,

1 ನೇ ಹೆಚ್ಚುವರಿ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ, ಸಿಂಧನೂರು.